‘ವಿವೇಕ’ದಲ್ಲಿ ಸಂಭ್ರಮಿಸಿದ ಸಾಂಸ್ಕೃತಿಕ ನಗರಿ

೧೫೫ನೇ ಜಯಂತಿಯಲ್ಲಿ ಸ್ವಾಮಿ ವಿವೇಕಾನಂದರ ವಿಚಾರ ಮನನ

ವಿವೇಕಾನಂದನಗರ ನಿವಾಸಿಗಳ ಸಂಘದಿಂದ ಮೈಸೂರಿನ ವಿವೇಕಾನಂದ ವೃತ್ತದಲ್ಲಿರುವ ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಎಸ್.ರಾಮದಾಸ್, ಸೀಮಾ ಪ್ರಸಾದ್, ಬಿ.ವಿ.ಮಂಜುನಾಥ್, ಜಗದೀಶ್, ಎಂ.ಕೆ.ಶಂಕರ್, ಬಿ.ಎಂ.ರಘು, ಹೇಮಂತ್, ವಿ.ಎನ್.ಕೃಷ್ಣ, ವಿದ್ಯಾಅರಸ್, ಸಂತೋಷ್(ಶಂಭು), ರವೀಂದ್ರ ಜೋಶಿ ಇನ್ನಿತರರು ಚಿತ್ರದಲ್ಲಿದ್ದಾರೆ.

ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರದ ಸಾಂಸ್ಕೃತಿಕ ವೇದಿಕೆಯಿಂದ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಪ್ರಾಧ್ಯಾಪಕರಾದ ಡಾ.ಸರ್ವಮಂಗಳ, ಡಾ.ಎಚ್.ಶ್ರೀಕಂಠಪ್ರಸಾದ್, ಡಾ.ಎಂ.ವಿಜಯಮ್ಮ, ಪ್ರಾಂಶುಪಾಲ ಡಾ.ಎಂ.ಚನ್ನಬಸವೇಗೌಡ, ಪ್ರೊ.ಎಂ.ನಂಜುಂಡಯ್ಯ ಇತರರು ಚಿತ್ರದಲ್ಲಿದ್ದಾರೆ.

ಮೈಸೂರು,ಜ.೧೨- ಮಾನವೀಯತೆಗೆ ಬದ್ಧವಾದ ಹೊಸ ಮನುಕುಲದ ನಿರ್ಮಾಣದಲ್ಲಿ ಮುಂದಾಗಿ ತಮ್ಮ ಜೀವನವನ್ನೇ ಸಂದೇಶವನ್ನಾಗಿಸಿ, ವಿಶ್ವದ ಯುವಜನರಿಗೆ ಇಂದಿಗೂ ಸ್ಫೂರ್ತಿಯಾಗಿರುವ ಸ್ವಾಮಿ ವಿವೇಕಾನಂದರ ೧೫೫ನೇ ಜನ್ಮ ದಿನೋತ್ಸವವನ್ನು ಸಾಂಸ್ಕೃತಿಕ ನಗರದೆಲ್ಲೆಡೆ ಸಂಭ್ರಮದಿಂದ ಶುಕ್ರವಾರ ಆಚರಿಸಲಾಯಿತು.

ಒಂಟಿಕೊಪ್ಪಲಿನ ಚೆಲುವಾಂಬ ಉದ್ಯಾನವನದಲ್ಲಿ ಪುಟಾಣಿಗಳು ಸ್ವಾಮಿ ವಿವೇಕಾನಂದರ ವಸ್ತ್ರ ಧರಿಸಿ ಸಂತಸ ಪಟ್ಟರೆ, ಶಾಲಾ-ಕಾಲೇಜುಗಳಲ್ಲಿ ವಿಶೇಷ ಉಪನ್ಯಾಸಗಳ ಮೂಲಕ ವಿವೇಕಾನಂದರ ಆದರ್ಶಗಳನ್ನು ಪರಿಚಯಿಸಲಾಯಿತು. ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು.

ರಾಷ್ಟ್ರಜಾಗೃತಿ ಪುಸ್ತಕ ವಿತರಣೆ: ವಿಶ್ವಹಿಂದೂ ಧರ್ಮ ಸಂರಕ್ಷಣಾ ವೇದಿಕೆಯ ಆಶ್ರಯದಲ್ಲಿ ಒಂಟಿಕೊಪ್ಪಲಿನ ಚೆಲುವಾಂಬ ಉದ್ಯಾನವನದಲ್ಲಿ ‘ಸ್ವಾಮಿ ವಿವೇಕಾನಂದರ ಜಯಂತಿ ಮತ್ತು ರಾಷ್ಟ್ರೀಯ ಯುವ ದಿನ’ ಆಚರಿಸಲಾಯಿತು. ಸ್ವಾಮಿ ವಿವೇಕಾನಂದರ ನುಡಿ ಸಂಗ್ರಹದ ರಾಷ್ಟ್ರ ಜಾಗೃತಿ ಪುಸ್ತಕದ ೫೦೦ ಪ್ರತಿಗಳನ್ನು ವಿತರಿಸಲಾಯಿತು. ಮಕ್ಕಳು ವಿವೇಕಾನಂದರ ವೇಷ ತೊಟ್ಟು ಸಂಭ್ರಮಿಸಿದರು.

ಬಿಜೆಪಿ ನಗರಾಧ್ಯಕ್ಷ ಡಾ.ಬಿ.ಎಚ್.ಮಂಜುನಾಥ್, ಚಾಮರಾಜ ಕ್ಷೇತ್ರದ ಮುಖಂಡ ಹರೀಶ್ ಗೌಡ, ವೇದಿಕೆಯ ಜಿಲ್ಲಾಧ್ಯಕ್ಷ ಬಿ.ಎನ್.ಸ್ವಾಮಿಗೌಡ, ಸಂಚಾಲಕ ಬಿ.ವಿ.ಗದಾಧರ, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಸಣ್ಣವೀರಪ್ಪ, ಅರವಿಂದ ಶರ್ಮಾ, ಸತ್ಯಾನಂದ, ಕೃಷ್ಣೇಗೌಡ, ಪುನೀತ ಇನ್ನಿತರರು ಉಪಸ್ಥಿತರಿದ್ದರು.

ಮಹಾರಾಣಿ ಕಾಲೇಜು: ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರದ ಸಾಂಸ್ಕೃತಿಕ ವೇದಿಕೆಯಿಂದ ನಡೆದ ಸ್ವಾಮಿ ವಿವೇಕಾನಂದರ ೧೫೫ನೇ ಜನ್ಮ ದಿನದ ಅಂಗವಾಗಿ ಸಮಾಜ ಶಾಸ್ತ್ರ ವಿಭಾಗ ಸಹಾಯಕ ಪ್ರಾಧ್ಯಾಪಕಿ ಡಾ.ಸರ್ವಮಂಗಳ ‘ಸ್ವಾಮಿ ವಿವೇಕಾನಂದರು ಮತ್ತು ಮಹಿಳೆ’ ಹಾಗೂ ಭೂಗೋಳಶಾಸ್ತ್ರ ಸ್ನಾತಕೋತ್ತರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಎಚ್.ಶ್ರೀಕಂಠಪ್ರಸಾದ್ ‘ವಿವೇಕಾನಂದರು ಮತ್ತು ಶಿಕ್ಷಣ’ ಕುರಿತು ಉಪನ್ಯಾಸ ನೀಡಿದರು.

ತತ್ವಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎಂ.ವಿಜಯಮ್ಮ ‘ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಚಿಂತನೆ’ ಕುರಿತು ಮಾತನಾಡಿದರು. ವಿದ್ಯಾರ್ಥಿಗಳಾದ ಪಲ್ಲವಿ, ಆಯಿಷಾ, ಆಯಿಷಾ ಮರಿಯಂ ‘ಸ್ವಾಮಿ ವಿವೇಕಾನಂದರು ಮತ್ತು ಯುವ ಜನತೆ’ ವಿಷಯವಾಗಿ ಮಾತನಾಡಿ ಗಮನ ಸೆಳೆದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಚನ್ನಬಸವೇಗೌಡ, ಸಾಂಸ್ಕೃತಿಕ ವೇದಿಕೆ ಅಧ್ಯಾಪಕ ಕಾರ್ಯದರ್ಶಿ ಪ್ರೊ.ಎಂ.ನಂಜುಂಡಯ್ಯ, ಅಧ್ಯಾಪಕ ಖಜಾಂಚಿ ಪ್ರೊ.ಬಿ.ಎಸ್.ಶೈಲಜಾ, ವಿದ್ಯಾರ್ಥಿ ಅಧ್ಯಕ್ಷೆ ಲಾವಣ್ಯ, ಕಾರ್ಯದರ್ಶಿ ಆಯಿಷಾ ಬಾನು, ಪ್ರಾಧ್ಯಾಪಕಿ ಮನೋಮಣಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಕನ್ನಡ ವೇದಿಕೆ: ಮೈಸೂರು ಕನ್ನಡ ವೇದಿಕೆಯಿಂದ ನ್ಯಾಯಾಲಯ ರಸ್ತೆಯಲ್ಲಿರುವ ತಮಿಳು ಶಾಲೆಯಲ್ಲಿ ಆಯೋಜಿಸಿದ್ದ ‘ಕನ್ನಡ ದಿನ ದರ್ಶಿಕೆ ಬಿಡುಗಡೆ ಹಾಗೂ ಸ್ವಾಮಿ ವಿವೇಕಾನಂದ, ರಾಷ್ಟ್ರಕವಿ ಕುವೆಂಪು ಅವರ ಸ್ಮರಣಾ ಕಾರ್ಯಕ್ರಮವನ್ನು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಚ್.ವಿ. ರಾಜೀವ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಗಡಿಭಾಗಗಳಲ್ಲಿ ಕನ್ನಡ ಭಾಷೆಯನ್ನು ಉಳಿಸುವ ಕೆಲಸ ಆಗಬೇಕಿದೆ. ಈ ದಿಸೆಯಲ್ಲಿ ತಮಿಳು ಶಾಲೆಯಲ್ಲಿ ಕನ್ನಡ ದಿನದರ್ಶಿಕೆ ಬಿಡುಗಡೆ ಮಾಡುತ್ತಿರುವುದು ಶ್ಲಾಘನೀಯವಾಗಿದೆ.

ಸಾಹಿತಿ ಬನ್ನೂರು ಕೆ.ರಾಜು, ಚಾಮರಾಜ ಸ್ಪೋರ್ಟ್ಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ರಾಜೀವ್, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಆರ್.ರವಿಕುಮಾರ್, ಎಲ್ಐಸಿ ಪ್ರತಿನಿಧಿ ನಾಗೇಂದ್ರ, ವೇದಿಕೆಯ ಅಧ್ಯಕ್ಷ ಎಸ್.ಬಾಲಕೃಷ್ಣ, ಪದಾಧಿಕಾರಿಗಳಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ರೇವಣ್ಣ, ಪ್ಯಾಲೇಸ್ ಬಾಬು, ರಾಧಾಕೃಷ್ಣ, ಗೋಪಿ ಬೀಡಾಬಾಬು, ದೊರೆಸ್ವಾಮಿ, ಮಂಜುನಾಥ್, ಪಾಪಣ್ಣಿ, ಮದನ್, ಸುನಿಲ್, ಧನಪಾಲ್, ಡಿ.ಪಿ.ಕೆ.ಪರಮೇಶ್, ಸತೀಶ್, ಅರವಿಂದ, ಸ್ವಾಮಿ, ಶಂಕರ್, ಡಿ.ಪಿ.ಪರಮೇ ಶ್ವರ್, ಮಿನಿ ಬಂಗಾರಪ್ಪ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂಗೀತ ವಿಶ್ವ ವಿದ್ಯಾನಿಲಯ: ಲಕ್ಷ್ಮಿಪುರಂನಲ್ಲಿರುವ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವದ ಅಂಗವಾಗಿ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಅಧ್ಯಾಪಕ ಎಸ್.ಎಸ್. ರಮೇಶ್ ಅವರು ವಿಶೇಷ ಉಪನ್ಯಾಸ ನೀಡಿದರು.

ಸ್ವಾಮಿ ವಿವೇಕಾನಂದರ ಜೀವನವೇ ಒಂದು ಸಂದೇಶವಾಗಿದೆ. ಅವರ ಜೀವನದ ಹಾದಿಯನ್ನು ಇಂದಿನ ಯುವ ಪೀಳಿಗೆ ಅರಿಯಬೇಕು ಎಂದು ರಮೇಶ್ ತಿಳಿಸಿದರು. ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಸರ್ವಮಂಗಳಾ ಶಂಕರ್, ಹಣಕಾಸು ಅಧಿಕಾರಿ ಎಚ್.ಎನ್.ಗಾಯತ್ರಿ ಇನ್ನಿತರರು ಉಪಸ್ಥಿತರಿದ್ದರು.

ವಿವೇಕಾನಂದ ನಗರ ನಿವಾಸಿಗಳ ಸಂಘ: ನಗರಪಾಲಿಕೆ ಸದಸ್ಯೆ ಸೀಮಾ ಪ್ರಸಾದ್ ನೇತೃತ್ವದಲ್ಲಿ ವಿವೇಕಾನಂದ ನಗರ ನಿವಾಸಿಗಳ ಸಂಘದಿಂದ ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವವನ್ನು ಆಚರಿಸಲಾಯಿತು.

ವಿವೇಕಾನಂದ ವೃತ್ತದಲ್ಲಿನ ಸ್ವಾಮಿ ವಿವೇಕಾನಂದರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಮಾಜಿ ಸಚಿವ ಎಸ್.ಎ.ರಾಮದಾಸ್ ಮಾತನಾಡಿ, ನಡತೆ, ಬುದ್ಧಿವಂತಿಕೆ, ವಿನಯ ಹಾಗೂ ಸಹಾಯ ಮನೋಭಾವನೆಯೊಂದಿಗೆ ಸಮಾಜದಲ್ಲಿ ಜೀವನ ಸಾಗಿಸಬಹುದು ಎಂಬುದನ್ನು ತೋರಿಸಿಕೊಟ್ಟ ದಾರ್ಶನಿಕ ಸ್ವಾಮಿ ವಿವೇಕಾನಂದ ಎಲ್ಲರಿಗೂ ಸ್ಫೂರ್ತಿಯಾಗಿದ್ದಾರೆ ಎಂದರು.

ವಿವೇಕಾನಂದನಗರ ನಿವಾಸಿಗಳಾದ ಹಿರಿಯ ಪತ್ರಕರ್ತ ರವೀಂದ್ರ ಜೋಶಿ ಹಾಗೂ ‘ಆಂದೋಲನ’ ದಿನಪತ್ರಿಕೆ ವರದಿಗಾರ ಎಚ್.ಎಸ್.ದಿನೇಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ನಗರಪಾಲಿಕೆ ಸದಸ್ಯರಾದ ಸೀಮಾ ಪ್ರಸಾದ್, ಬಿ.ವಿ.ಮಂಜುನಾಥ್, ಜಗದೀಶ್, ಎಂ.ಕೆ.ಶಂಕರ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಬಿ.ಎಂ.ರಘು, ಬಿಜೆಪಿ ನಗರ ಯುವಮೋರ್ಚಾ ಉಪಾಧ್ಯಕ್ಷ ಹೇಮಂತ್, ಕೆ.ಆರ್.ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ವಿ.ಎನ್.ಕೃಷ್ಣ, ವಿದ್ಯಾಅರಸ್, ಕಾರ್ಯದರ್ಶಿ ಸಂತೋಷ್(ಶಂಭು), ಮಹಿಳಾ ಮೋರ್ಚಾದ ಸುವರ್ಣಚಂದ್ರು, ಜಯಂತಿ, ವಾರ್ಡ್ ಅಧ್ಯಕ್ಷರಾದ ನಾರಾಯಣ್‌ರಾವ್, ಗಿರೀಶ್, ಆರ್.ಆರ್. ರಮೇಶ್ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರು ವಿವಿ ತತ್ವಶಾಸ್ತ್ರ ಅಧ್ಯಯನ ವಿಭಾಗ ಸ್ವಾಮಿ ವಿವೇಕಾನಂದ ಪೀಠ

ಮೈಸೂರು,ಜ.೧೨- ಮೈಸೂರು ವಿಶ್ವವಿದ್ಯಾನಿಲಯ ತತ್ವಶಾಸ್ತ್ರ ವಿಭಾಗದ ಸ್ವಾಮಿ ವಿವೇಕಾನಂದ ಪೀಠ, ಡಾ.ಎಸ್. ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ ವಿಭಾಗದಿಂದ ಶುಕ್ರವಾರ ಮಾನಸ ಗಂಗೋತ್ರಿ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ ೧೫೫ನೇ ಜಯಂತಿಯನ್ನು ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿ ಜ್ಞಾನಯೋಗಾನಂದಜೀ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ, ಚಿಂತನೆ, ವಿಚಾರಗಳು ವೈಜ್ಞಾನಿಕ ನೆಲಗಟ್ಟಿನ ಮೇಲೆ ಕೇಂದ್ರೀಕೃತವಾಗಿವೆ. ಅವರು ಹೇಳಿರುವ ವಿಚಾರ, ತತ್ವ, ಚಿಂತನೆ ಹಾಗೂ ಆದರ್ಶ ಇಂದಿಗೂ ಪ್ರಸ್ತುತವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯ ಪ್ರಭಾರ ಕುಲಪತಿ ಪ್ರೊ.ಸಿ.ಬಸವರಾಜು ಮಾತನಾಡಿ, ಸಮಾಜದ ಒಳಿತಿಗಾಗಿ ವಿವೇಕಾನಂದರಂತೆ ದಾರ್ಶನಿಕರು ಹಲವು ಸಂದೇಶಗಳನ್ನು ನೀಡಿದ್ದಾರೆ ಎಂದರು.

ಸ್ವಾಮಿ ವಿವೇಕಾನಂದ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಜಿ.ಎಸ್.ಜಯದೇವ ಅವರು ‘ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣ ಮತ್ತು ಭಾರತೀಯ ಸಂಸ್ಕೃತಿ’ ಕುರಿತು ಉಪನ್ಯಾಸ ನೀಡಿದರು. ಕುಲಸಚಿವೆ ಡಿ.ಭಾರತಿ, ನಿವೃತ್ತ ಗ್ರಂಥಪಾಲಕ ಪ್ರೊ.ರಾಮಶೇಷ, ತತ್ವಶಾಸ್ತ್ರ ಅಧ್ಯಯನ ವಿಭಾಗದ ಡಾ.ಎಸ್.ವೆಂಕಟೇಶ್, ಸ್ವಾಮಿ ವಿವೇಕಾನಂದ ಅಧ್ಯಯನ ಪೀಠದ ಡಾ.ಶೇಷಗಿರಿ ಉಪಸ್ಥಿತರಿದ್ದರು.

Room For Rent

Single room with attached bath & open kitchen Slab, Solar, Geyser available @ 2nd floor, Vijayanagar. Ph: 9449843316

ಸಂಕ್ಷಿಪ್ತ ಜಾಹೀರಾತು

3X1 ಕಾಲಂ = 350ರೂ.

4X1 ಕಾಲಂ = 450ರೂ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಬೆಂಗಳೂರು ಸಿಟಿ, ಪ್ರಕಾಶನಗರ, 3ನೇ ಮೇನ್, 6ನೇ ಸಿ ಕ್ರಾಸ್, ಮನೆ ನಂ. 863 ರಲ್ಲಿ ವಾಸವಾಗಿರುವ ಶ್ರೀ ಕೆ.ಕಂದಸ್ವಾಮಿ ರವರ ಮಗ ಶ್ರೀ ಕೆ.ಲಿಂಗಪ್ಪರವರ ಹೇಳಿಕೆ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ: ಈ ಕೆಳಕಂಡ ಷೆಡ್ಯೂಲ್ ಸ್ವತ್ತು ಶ್ರೀ ಎಲ್ಲಪ್ಪ ಬಿನ್ ವೆಂಕಟೇಶಯ್ಯರವರ ಸ್ವಯಾರ್ಜಿತ ಸ್ವತ್ತಾಗಿದ್ದು, ಸದರಿ ಸ್ವತ್ತು ಅವರ ಸಂಪೂರ್ಣ ಮಾಲೀಕತ್ವಕ್ಕೆ ಹಾಗೂ ಸ್ವಾಧೀನಾನುಭವಕ್ಕೆ ಒಳಪಟ್ಟಿರುತ್ತದೆ. ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಶ್ರೀ ಕೆ.ಲಿಂಗಪ್ಪ ರವರು ಖರೀದಿ ಮಾಡಲು ಇಚ್ಛಿಸಿದ್ದು ಈ ಬಗ್ಗೆ ಸಾರ್ವಜನಿಕರಲ್ಲಿ ಯಾರಿಗಾದರೂ ಆಕ್ಷೇಪ ಅಥವಾ ತಂಟೆ ತಕರಾರುಗಳಿದ್ದಲ್ಲಿ ಅಂತಹವರುಗಳು ತಮ್ಮ ತಕರಾರನ್ನು ಖುದ್ದಾಗಿಯಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಈ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ. ನಂತರ ಬರುವ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಷೆಡ್ಯೂಲ್: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮಕ್ಕೆ ಸೇರಿದ ಸರ್ವೆ ನಂ. 648ರ ವಿಸ್ತೀರ್ಣ1 ಎಕರೆವುಳ್ಳ ಜಮೀನಿಗೆ ಚೆಕ್ಕುಬಂಧಿ: ಪೂರ್ವಕ್ಕೆ: ಎಂ.ಕೆ.ಶ್ರೀನಿವಾಸ್‌ರವರ ಸ್ವತ್ತು, ಪಶ್ಚಿಮಕ್ಕೆ: ಎಂ.ಕೆ.ವೆಂಕಟೇಶ್‌ರವರ ಸ್ವತ್ತು, ಉತ್ತರಕ್ಕೆ: ಸರ್ವೆ ನಂ. 645ರ ಸ್ವತ್ತು, ದಕ್ಷಿಣಕ್ಕೆ: ಸರ್ವೆ ನಂ. 646ರ ಸ್ವತ್ತು.

ಸಂತೋಷ್‌ಕುಮಾರ್, ಬಿ.ಎ., ಎಲ್‌ಎಲ್‌ಬಿ, ವಕೀಲರು, ಜಯನಗರ, ಮೈಸೂರು ಮೊ: 9019236402.

ದಿನಾಂಕ: 12-1-2018

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ (ಪ), ಸಯ್ಯಾಜಿರಾವ್ ರಸ್ತೆ

ಮೈಸೂರು - 570024 ದೂ/ಫ್ಯಾಕ್ಸ್:0821-2418828

ಸಂಖ್ಯೆ: ಮೈನಪಾ/ಕಾಇಂ(ಪ)/ಟಿಎನ್-27/17-18 ದಿನಾಂಕ: 11-01-2018

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಿಸಿರುವ ವಾರ್ಡ್ ನಂ.44ರ ಇಂದಿರಾ ಕ್ಯಾಂಟೀನ್ ಕಟ್ಟಡಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗೆ ಮೇಲೆ ಕಾಣಿಸಿದ ಉಲ್ಲೇಖದನ್ವಯ ಮರು ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 11-01-2018ರ ನಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.inನಲ್ಲಿ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: 18-01-2018 ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: 19-01-2018 ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರವರ (ಪ) ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು (ಪ)

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಮೊದಲನೆಯ ಪುಟದಿಂದ

ನ್ಯಾಯದಲ್ಲೇ ದುಗುಡ

ವಿಶೇಷ ಸಿಬಿಐ ನ್ಯಾಯಾಧೀಶ ಬಿ.ಎಚ್.ಲೋಯಾ ಅವರ ಸಂಶಯಾಸ್ಪದ ಸಾವಿನ ಪ್ರಕರಣದ ಬಗ್ಗೆ ಹೇಳುತ್ತಿದ್ದೀರಾ? ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ, ನ್ಯಾಯಮೂರ್ತಿ ಗೊಗೋಯಿ ಅವರು ‘ಹೌದು’ ಎಂದು ಚುಟುಕು ಉತ್ತರ ನೀಡಿದರು.

ಈ ಮಧ್ಯೆ, ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರು ಮಧ್ಯಾಹ್ನ ೨ ಗಂಟೆಗೆ ಸುದ್ದಿಗೋಷ್ಠಿ ನಡೆಸಲಿದ್ದಾರೆ ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ, ಸುದ್ದಿಗೋಷ್ಠಿ ನಡೆಯಲಿಲ್ಲ.

ಲೋಯಾ ಪ್ರಕರಣ?: ಉಗ್ರಗಾಮಿ ಸಂಘಟನೆ ಲಷ್ಕರ್-ಎ-ತೊಯ್ಬಾದ ಸಂಪರ್ಕದಲ್ಲಿದ್ದಾರೆ ಎಂಬ ಹಿನ್ನೆಲೆಯಲ್ಲಿ ಸೊಹ್ರಾಬುದ್ದೀನ್ ಶೇಖ್ ಹಾಗೂ ಆತನ ಬಂಟ ತುಳಸಿರಾಮ್ ಪ್ರಜಾಪತಿ ಅವರನ್ನು ಗುಜರಾತ್ ಪೊಲೀಸರು ನಕಲಿ ಎನ್‌ಕೌಂಟರ್ ಮಾಡಿ ಕೊಂದಿದ್ದರು. ಇದು ದೇಶದಲ್ಲಿ ದೊಡ್ಡ ಚರ್ಚೆ ಹುಟ್ಟುಹಾಕಿತ್ತು. ಈ ಪ್ರಕರಣದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಅವರ ವಿರುದ್ಧವೂ ಆರೋಪ ಕೇಳಿಬಂದಿತ್ತು. ಈ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬ್ರಿಜ್‌ಗೋಪಾಲ್ ಹರ್‌ಕಿಶನ್ ಲೋಯಾ ಅವರು, ೨೦೧೪ರಲ್ಲಿ ನಾಗಪುರದಲ್ಲಿ ನಿಗೂಢವಾಗಿ ಮೃತಪಟ್ಟಿದ್ದರು. ಅವರ ಸಾವಿನ ಬಗ್ಗೆ ಕುಟುಂಬದವರು ಅನುಮಾನ ವ್ಯಕ್ತಪಡಿಸಿದ್ದರು.

ನ್ಯಾಯಾಂಗವೇ ಸರಿಪಡಿಸಿಕೊಳ್ಳಲಿದೆ: ನಾಲ್ವರು ನ್ಯಾಯಮೂರ್ತಿಗಳ ಸುದ್ದಿಗೋಷ್ಠಿ ನಡೆದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಅವರ ಜತೆ ಚರ್ಚಿಸಿದರು.

ಬಳಿಕ ‘ಇದು ನ್ಯಾಯಾಂಗದ ಆಂತರಿಕ ವಿಚಾರ. ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ನ್ಯಾಯಾಂಗದ ಆಡಳಿತವೇ ಇದನ್ನು ಸರಿಪಡಿಸಿಕೊಳ್ಳಬಲ್ಲದು’ ಎಂಬ ಪ್ರತಿಕ್ರಿಯೆ ಕೇಂದ್ರ ಸರ್ಕಾರದಿಂದ ಹೊರಬಿದ್ದಿತು.

ಇನ್ನೊಂದೆಡೆ ವಿರೋಧ ಪಕ್ಷಗಳು ನ್ಯಾಯಮೂರ್ತಿಗಳ ಸುದ್ದಿಗೋಷ್ಠಿ ಬಗ್ಗೆ ಕಳವಳದಿಂದ ಪ್ರತಿಕ್ರಿಯಿಸಿವೆ. ನ್ಯಾಯಾಂಗದಲ್ಲಿ ಸರ್ಕಾರದ ಅತಿಯಾದ ಹಸ್ತಕ್ಷೇಪವೇ ಇದಕ್ಕೆ ಕಾರಣ ಎಂದು ತೃಣಮೂಲ ಕಾಂಗ್ರೆಸ್‌ನ ನಾಯಕಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರತಿಕ್ರಿಯಿಸಿದ್ದಾರೆ. ಭಾರತೀಯ ನ್ಯಾಯಾಂಗದ ವಿಶ್ವಾಸಾರ್ಹತೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಕಾಂಗ್ರೆಸ್, ಭಾರತದ ಪ್ರಜಾಸತ್ತೆ ಅಪಾಯದಲ್ಲಿದೆ ಎಂದು ಹೇಳಿದೆ.

ನಾಲ್ವರು ಹಿರಿಯ ನ್ಯಾಯಮೂರ್ತಿಗಳ ಸುದ್ದಿಗೋಷ್ಠಿ ‘ಅಭೂತಪೂರ್ವ’ ಮತ್ತು ‘ಅಸಾಮಾನ್ಯ’ ಎಂದು ವರ್ಣಿಸಿದೆ. ನ್ಯಾಯಮೂರ್ತಿಗಳು ಸುಪ್ರೀಂಕೋರ್ಟ್ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಆಡಿರುವ ಮಾತುಗಳ ಬಗ್ಗೆ ನಮಗೆ ತೀವ್ರ ಕಳವಳ ಉಂಟಾಗಿದೆ ಎಂದು ಕಾಂಗ್ರೆಸ್ ಅಧಿಕೃತ ಟ್ವಿಟರ್‌ನಲ್ಲಿ ಹೇಳಲಾಗಿದೆ.

ಹಿರಿಯ ವಕೀಲ, ಕಾಂಗ್ರೆಸ್ ನಾಯಕ ಕಪಿಲ್ ಸಿಬಲ್ ಮತ್ತು ಮನೀಶ್ ತಿವಾರಿ ಅವರು ಪಕ್ಷದ ಅಧ್ಯಕ್ಷ ರಾಹುಲ್ ಗಾಂಧಿ ಅವರ ನಿವಾಸಕ್ಕೆ ತೆರಳಿ ಸುಪ್ರೀಂಕೋರ್ಟ್‌ನ ಈ ತ್ವರಿತಗತಿಯ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದರು.

ರಾಜ್ಯ ಉಚ್ಚ ನ್ಯಾಯಾಲಯ ಪ್ರಕರಣ: ಬೆಂಗಳೂರು: ಸರ್ವೋಚ್ಚ ನ್ಯಾಯಾಲಯದ ನಾಲ್ವರು ನ್ಯಾಯಮೂರ್ತಿಗಳು ಆರೋಪಿಸಿದ ಬೆನ್ನಲ್ಲೇ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಈ ಹೇಳಿಕೆಗೆ ಪುಷ್ಟಿ ನೀಡುವಂಥ ಘಟನೆ ಶುಕ್ರವಾರ ನಡೆದಿದೆ.

ರಾಮಕಥಾ ಗಾಯಕಿ ಪ್ರೇಮಲತಾ ಮೇಲೆ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಅತ್ಯಾಚಾರವೆಸಗಿದ್ದಾರೆ ಎನ್ನಲಾದ ಆರೋಪದ ಪ್ರಕರಣವನ್ನು ನ್ಯಾಯಮೂರ್ತಿಗಳು ಪದೇ ಪದೇ ಪ್ರಕರಣದ ವಿಚಾರಣೆ ನಡೆಸಲು ಹಿಂದೇಟು ಹಾಕುತ್ತಿರುವುದು ಸರಿಯಷ್ಟೆ. ಈ ಸಂಬಂಧ ಶುಕ್ರವಾರ ನಡೆದ ವಿಚಾರಣೆಯಲ್ಲೂ ಗೌರವಾನ್ವಿತ ನ್ಯಾಯಧೀಶರು ಸದರಿ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದಿರುವುದು ಈಗ ಚರ್ಚೆಗೆ ಗ್ರಾಸವಾಗಿದೆ.

ರಾಮಕಥಾ ಗಾಯಕಿ ಪ್ರೇಮಲತಾ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ರಾಘವೇಶ್ವರ ಭಾರತೀ ಶ್ರೀಗಳನ್ನು ಆರೋಪ ಮುಕ್ತಾಯಗೊಳಿಸಿದ್ದ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿದ್ದ ಮೇಲ್ಮನವಿ ವಿಚಾರಣೆಯಿಂದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಶುಕ್ರವಾರ ಹಿಂದೆ ಸರಿದಿದ್ದಾರೆ.

ಸಂಕ್ರಾಂತಿ ಅಂಗವಾಗಿ ಸೀರೆ ವಿತರಣೆ

ಸಂಕ್ರಾಂತಿ ಹಬ್ಬದ ಪ್ರಯುಕ್ತ ಮುಡಾ ಅಧ್ಯಕ್ಷ ಡಿ.ಧ್ರುವಕುಮಾರ್ ಅವರು ಡಿ ಗ್ರೂಪ್ ಮಹಿಳಾ ನೌಕರರಿಗೆ ಸೀರೆ ವಿತರಣೆ ಮಾಡಿದರು. ಮುಡಾ ಮಾಜಿ ಸದಸ್ಯರಾದ ಭಾಸ್ಕರ್ ಎಲ್.ಗೌಡ, ಅನ್ನುಬಾಯ್, ಮೈಲ್ಯಾಕ್ ಅಧ್ಯಕ್ಷ ಎಚ್.ಎ.ವೆಂಕಟೇಶ್, ನಗರಪಾಲಿಕೆ ಸದಸ್ಯ ಸ್ನೇಕ್ ಶ್ಯಾಮ್, ಗೋಪಿ, ರವಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಸಾಂಸ್ಕೃತಿಕ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ವಾಸು

ಮೈಸೂರು,ಜ.೧೨- ಅಖಿಲ ಭಾರತ ಕನ್ನಡ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ಈ ತಿಂಗಳಾಂತ್ಯದಲ್ಲಿ ನಡೆಸಲಿರುವ ಅಖಿಲ ಭಾರತ ಕನ್ನಡ ಸಾಂಸ್ಕೃತಿಕ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಚಾಮರಾಜ ಕ್ಷೇತ್ರದ ಶಾಸಕ ವಾಸು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪರಿಷತ್ತಿನ ಗೌರವಾಧ್ಯಕ್ಷ ಪ್ರೊ.ನೀ.ಗಿರಿಗೌಡ ತಿಳಿಸಿದ್ದಾರೆ.

ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ

ಮೈಸೂರು,ಜ.೧೨- ಮರಿಮಲ್ಲಪ್ಪ ಕಾಲೇಜಿನ ದ್ವಿತೀಯ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ರಾಕೇಶ್ ಅವರು ಹೊಸದಿಲ್ಲಿ ನಡೆದ ೬೩ನೇ ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿಯ ೧೯ ವರ್ಷದೊಳಗಿನವರ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ.

ಮತದಾರರ ಹೆಸರು ನೋಂದಣಿಗೆ ೫.೨೨ರವರೆಗೆ ಅವಕಾಶ

ಬೆಂಗಳೂರು,ಜ.೧೨-ರಾಜಕೀಯ ಪಕ್ಷಗಳು ಹಾಗೂ ಜಿಲ್ಲಾಧಿಕಾರಿಗಳ ಕೋರಿಕೆಯ ಮೇರೆಗೆ ಮತದಾರರ ಸೂಚಿಯಲ್ಲಿ ಹೆಸರು ನೊಂದಾಯಿಸುವ ಅಂತಿಮ ದಿನಾಂಕವನ್ನು ಜ.೨೨ರವರೆಗೆ ಹೆಚ್ಚಿಸಲಾಗಿದ್ದು, ಮತದಾರರ ಅಂತಿಮ ಸೂಚಿ ಫೆ.೨೮ರಂದು ಪ್ರಕಟಗೊಳ್ಳಲಿದೆ ಎಂದು ರಾಜ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಸರುಗಳನ್ನು ಸೇರಿಸಲು ಅಥವಾ ತೆಗೆಸಲು ಇದೇ ತಿಂಗಳು ೨೨ರವರೆಗೂ ಅವಕಾಶವಿದೆ. ಈ ಕುರಿತು ಜನರಲ್ಲಿ ಅರಿವು ಮೂಡಿಸಲು ಬೂತ್ ಮಟ್ಟದ ನಗರಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳು ಮನೆ ಮನೆಗೆ ತೆರಳಿದ್ದಾರೆ ಎಂದು ಅವರು ತಿಳಿಸಿದರು.

ರಾಜಕೀಯ ಪಕ್ಷಗಳು ಬೂತ್ ಮಟ್ಟದಲ್ಲಿ ಏಜೆಂಟರನ್ನು ನೇಮಿಸಿ ಮತದಾರರ ಸೂಚಿಯನ್ನು ಸರಿಪಡಿಸುವ ಕಾರ್ಯದಲ್ಲಿ ಸಹಕಾರಿಯಾಗುವಂತೆ ಅವರು ಕೋರಿದ್ದಾರೆ.

ಅಪರಾಧ, ಅನಾಹುತ, ಅಪಘಾತ ಸುದ್ದಿಗಳ ಸುತ್ತು...

ದೇವಾಲಯದ ಆದಾಯಕ್ಕೆ ಧಕ್ಕೆ ತರುತ್ತಿದ್ದ ಪರಿಚಾರಕ ಅಮಾನತು

ಮೈಸೂರು,ಜ.೧೨- ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಹುಂಡಿಯ ಮೇಲೆ ಮಂಗಳಾರತಿ ತಟ್ಟೆಯನ್ನು ಇಟ್ಟು, ಕಾಣಿಕೆಯು ಹುಂಡಿಗೆ ಬೀಳದಂತೆ ನೋಡಿಕೊಂಡು ದೇವಾಲಯದ ಆದಾಯಕ್ಕೆ ಧಕ್ಕೆ ತರುತ್ತಿದ್ದ ಆರೋಪದಡಿ ಪರಿಚಾರಕನೊಬ್ಬನನ್ನು ಜಿಲ್ಲಾಧಿಕಾರಿ ಡಿ.ರಂದೀಪ್ ಅವರು ಅಮಾನತ್ತುಗೊಳಿಸಿ ಆದೇಶಿಸಿದ್ದಾರೆ.

ದೇವಸ್ಥಾನದ ಪರಿಚಾರಕ ಎನ್.ಶ್ರೀನಿವಾಸನ್ ಎಂಬವರೇ ಅಮಾನತ್ತು ಶಿಕ್ಷೆಗೊಳಗಾದವರು.

ಚಾಮುಂಡೇಶ್ವರಿ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದಾಗಿದ್ದು, ಜಿಲ್ಲಾಧಿಕಾರಿಗಳು ಆಡಳಿತಾಧಿಕಾರಿಗಳಾಗಿದ್ದಾರೆ. ದೇವಸ್ಥಾನಕ್ಕೆ ಭೇಟಿ ನೀಡುವ ಜನರು ಹುಂಡಿಗೆ ಹಣ ಹಾಕುವುದು ಸಾಮಾನ್ಯ. ಇಲ್ಲಿಗೆ ಭೇಟಿ ನೀಡುವವರು ನೀಡುವ ಕಾಣಿಕೆ ಹಣವನ್ನು ಸ್ವಂತಕ್ಕೆ ಬಳಸುವಂತಿಲ್ಲ. ಅದು ದೇವಸ್ಥಾನದ ಸ್ವತ್ತು. ಜೊತೆಗೆ ಹುಂಡಿಗೆ ಯಾವುದೇ ವಸ್ತುವನ್ನು ಅಡ್ಡವಿಡುವಂತಿಲ್ಲ.

ಹೀಗಿದ್ದರೂ, ಶ್ರೀನಿವಾಸ್ ಅವರು ಹುಂಡಿಗೆ ಆರತಿ ತಟ್ಟೆಯನ್ನು ಅಡ್ಡವಿಡುತ್ತಿದ್ದುದಲ್ಲದೆ, ಜನರು ಹುಂಡಿಗೆ ಹಣ ಹಾಕದಂತೆ ಕೈ ಚಾಚುತ್ತಿದ್ದರು ಎಂಬ ದೂರು ಕೇಳಿಬಂದಿತ್ತು. ಈ ಸಂಬಂಧ ಅವರಿಗೆ ದೇವಸ್ಥಾನದ ವತಿಯಿಂದ ನೋಟಿಸ್ ಕೂಡ ನೀಡಲಾಗಿತ್ತು.

ಇದಾದ ನಂತರ ಅವರು ತಮ್ಮ ಬದಲಾಗಿ ಅನಧಿಕೃತ ವ್ಯಕ್ತಿಗಳನ್ನು ಹುಂಡಿಯ ಬಳಿ ನಿಲ್ಲಿಸಿ ಅವರ ಮೂಲಕ ಆರತಿ ತಟ್ಟೆಯನ್ನು ಹಿಡಿಸಿ ಜನರು ಹುಂಡಿಗೆ ಹಣ ಹಾಕದಂತೆ ನೋಡಿಕೊಳ್ಳುತ್ತಿದ್ದರು ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ಈ ಎಲ್ಲ ದೃಶ್ಯಗಳೂ ದೇವಸ್ಥಾನದಲ್ಲಿ ಅಳವಡಿಸಲಾಗಿ ರುವ ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಪರಿಚಾರಕ ಶ್ರೀನಿವಾಸ್‌ನನ್ನು ಜಿಲ್ಲಾಧಿಕಾರಿ ಡಿ.ರಂದೀಪ್ ಅವರು ಅಮಾನತುಗೊಳಿಸಿದ್ದಾರೆ.

ಕಾರು ಅಡವಿಟ್ಟು ವಂಚನೆ: ದೂರು

ಮೈಸೂರು,ಜ.೧೨- ಇನ್ನೋವಾ ಕಾರನ್ನು ಅಡವಿಟ್ಟು, ನಂತರದ ದಿನಗಳಲ್ಲಿ ಸಾಲ ತೀರಿಸುವುದಾಗಿ ನಂಬಿಸಿ ಕಾರನ್ನು ಕೊಂಡೊಯ್ದು ವಂಚಿಸುತ್ತಿದ್ದ ನಗರದ ಗೋಕುಲಂ ನಿವಾಸಿ ಕುಮಾರ್ ಅಲಿಯಾಸ್ ನರೇಂದ್ರ ಕುಮಾರ್ ಎಂಬವರ ವಿರುದ್ಧ ಕೆ.ಆರ್.ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಇವರು ನೂರಡಿ ರಸ್ತೆಯ ರಾಘವೇಂದ್ರ ಎಂಬವರಿಗೆ ಇನ್ನೋವಾ ಕಾರನ್ನು ಅಡವಿಟ್ಟಿದ್ದರು. ಕೆಲದಿನಗಳ ನಂತರ ಬಂದ ಅವರು ನಿಮ್ಮ ಸಾಲ ತೀರಿಸಲು ಕಷ್ಟವಾಗುತ್ತಿದೆ. ಕಾರನ್ನು ನೀಡಿದಲ್ಲಿ ಬಾಡಿಗೆಗೆ ಬಿಟ್ಟು ಹಣ ಸಂಪಾದಿಸಿ ನಿಮ್ಮ ಸಾಲ ತೀರಿಸುತ್ತೇವೆ ಎಂದು ನಂಬಿಸಿ ಕಾರನ್ನು ಪಡೆದುಕೊಂಡು ಹೋಗಿದ್ದವರು ತಿಂಗಳಾನುಗಟ್ಟಲೇ ರಾಘವೇಂದ್ರ ಅವರ ಮನೆಯತ್ತ ಸುಳಿದಿರಲಿಲ್ಲ. ಅಷ್ಟೇ ಅಲ್ಲದೇ ಅದೇ ವಾಹನವನ್ನು ಹುಣಸೂರಿನ ವ್ಯಕ್ತಿಯೊಬ್ಬರಿಗೂ ತೋರಿಸಿ ಅಡವಿಡುವ ಬಗ್ಗೆ ಮಾತುಕತೆಯಾಡಿದ್ದರು. ಈ ವಿಚಾರ ತಿಳಿದ ರಾಘವೇಂದ್ರ ಅವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ವಂಚಕನ ವಿರುದ್ಧ ತನಿಖೆ ನಡೆಸುತ್ತಿದ್ದು, ಆತನಿಗೆ ಸಹಾಯ ಮಾಡುತ್ತಿದ್ದ ಇಂದ್ರಾಣಿ ಎಂಬವರ ಪತ್ತೆಗೆ ಕೂಡ ಪೊಲೀಸರು ಜಾಲ ಬೀಸಿದ್ದಾರೆ.

ಕಾರು-ಬೈಕ್ ಡಿಕ್ಕಿ: ಸವಾರ ಸಾವು



ಮೈಸೂರು,ಜ.೧೨- ಕಾರು ಹಾಗೂ ಬೈಕ್ ನಡುವೆ ನಡೆದ ಅಪಘಾತದಲ್ಲಿ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ರಮಾಬಾಯಿ ನಗರದ ರಿಂಗ್ ರಸ್ತೆಯ ರೈಲ್ವೆ ಸೇತುವೆ ಬಳಿ ನಡೆದಿದೆ. ಸಿದ್ದಪ್ಪಾಜಿ (೬೫) ಸ್ಥಳದಲ್ಲೇ ಸಾವನ್ನಪ್ಪಿದವರು. ರವಿ(೫೦) ತೀವ್ರವಾಗಿ ಗಾಯಗೊಂಡಿದ್ದಾರೆ.

ಶ್ರೀರಾಂಪುರದಿಂದ ದಡದಹಳ್ಳಿ ಕಡೆ ಹೊರಬಿದ್ದ ಸಿದ್ದಪ್ಪಾಜಿ ಮತ್ತು ರವಿ ಅವರ ಬೈಕ್‌ಗೆ ಬಂಡಿಪಾಳ್ಯದ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಈ ರಭಸಕ್ಕೆ ೧೦ ಅಡಿ ಮೇಲೆ ಹಾರಿ ಬಿದ್ದ ಸಿದ್ದಪ್ಪಾಜಿ ಚಿಕಿತ್ಸೆಗೆ ಸ್ಪಂದಿಸದೇ ಸಾವನ್ನಪ್ಪಿದ್ದಾರೆ. ಕಾರು ಚಾಲಕಿ ಪರಾರಿಯಾಗಿದ್ದು, ಈ ಸಂಬಂಧ ಕೆ.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ. ೧೬ರಂದು ತಾಪಂ ಪ್ರಗತಿ ಪರಿಶೀಲನೆ ಸಭೆ

ಮೈಸೂರು,ಜ.೧೨-ತಾಲ್ಲೂಕು ಪಂಚಾಯತಿ ಅಧ್ಯಕ್ಷರಾದ ಕಾಳಮ್ಮ ಕೆಂಪರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಜ.೧೬ ರಂದು ಬೆಳಿಗ್ಗೆ ೧೦.೩೦ಕ್ಕೆ ಮೈಸೂರು ತಾಲ್ಲೂಕು ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯನ್ನು ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ (ಮಿನಿ ವಿಧಾನಸೌಧ ಕೊಠಡಿ ಸಂಖ್ಯೆ ೨೧೨) ರಲ್ಲಿ ಕರೆಯಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.